KAVP210000102015

Presented on : 13-07-2015
Registered on : 13-07-2015
Decided on : 07-07-2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬಸವನ ಬಾಗೇವಾಡಿ .**

**-:ಉಪಸ್ಥಿತರು:-**

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಸವನ ಬಾಗೇವಾಡಿ

**ಸಿ.ಸಿ. ನಂ.450/2015**

ದಿನಾಂಕಃ **7** ನೇ ಜುಲೈ **2026**

ಫಿರ್ಯಾದಿಃ ರಾಜ್ಯದ ಪರವಾಗಿ ಪೊಲೀಸ್ ಇನ್ಸ್ ಪೆಕ್ಟರ್,
ಕೋಲ್ಹಾರ ಪೊಲೀಸ್ ಠಾಣೆ.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿತರುಃ-

1. ಹಣಮಂತ ತಂದೆ ದುಂಡಪ್ಪ ಪೂಜಾರಿ ,
   ವಯಾಃ 68 ವರ್ಷ , ಸಾಃ ಕವಲಗಿ
2. ನಿಜಪ್ಪ ತಂದೆ ಹಣಮಂತ ಪೂಜಾರಿ ,

   ವಯಾಃ 32 ವರ್ಷ , ಸಾಃ ಕವಲಗಿ
3. ಮಹಾದೇವಿ ಗಂಡ ಹಣಮಂತ ಪೂಜಾರಿ ,
   ವಯಾಃ 55 ವರ್ಷ , ಸಾಃ ಕವಲಗಿ
4. ಮುದ್ದಪ್ಪ ತಂದೆ ಹಣಮಂತ ಪೂಜಾರಿ,
   ವಯಾಃ28 ವರ್ಷ , ಸಾಃ ಕವಲಗಿ

5. ದುಂಡಪ್ಪ ತಂದೆ ಹಣಮಂತ ಪೂಜಾರಿ ,
ವಯಾಃ 39 ವರ್ಷ , ಸಾಃ ಕವಲಗಿ

6. ಬಸವ್ವ ಗಂಡ ಹಣಮಂತ ಪೂಜಾರಿ ,
ವಯಾಃ 65 ವರ್ಷ , ಸಾಃ ಕವಲಗಿ

7. ಕಾಶೀಬಾಯಿ ಗಂಡ ದುಂಡಪ್ಪ ಪೂಜಾರಿ ,
ವಯಾಃ 32 ವರ್ಷ , ಸಾಃ ಕವಲಗಿ

8. ಸಾವಿತ್ರಿ ಗಂಡ ಮುದ್ದಪ್ಪ ಪೂಜಾರಿ ,
ವಯಾಃ 30 ವರ್ಷ , ಸಾಃ ಕವಲಗಿ

9. ರಂಗಪ್ಪ ತಂದೆ ಶಿವಪ್ಪ ಪೂಜಾರಿ ,
ವಯಾಃ 45 ವರ್ಷ , ಸಾಃ ಕವಲಗಿ

10. ಪ್ರಕಾಶ ತಂದೆ ಯಮನಪ್ಪ ನಡಗುಂದಿ ,
ವಯಾಃ42 ವರ್ಷ , ಸಾಃ ಕವಲಗಿ

11. ಯಲ್ಲಪ್ಪ ತಂದೆ ಸಾಬಪ್ಪ ಗಡೆದ
ವಯಾಃ ವರ್ಷ , ಸಾಃ ತಡಲಗಿ (ಮೃತಪಟ್ಟಿರುತ್ತಾರೆ. )

12. ಸುಸಲವ್ವ ಗಂಡ ಯಲ್ಲಪ್ಪ ಗಡೆದ ,
ವಯಾಃ 56 ವರ್ಷ , ಸಾಃ ತಡಲಗಿ

13. ಶ್ರೀಶೈಲಗೌಡ ತಂದೆ ಭೀಮನಗೌಡ ಪಾಟೀಲ ,
ವಯಾಃ63 ವರ್ಷ , ಸಾಃ ಕವಲಗಿ

14. ರಾಜು ತಂದೆ ಶ್ರೀಶೈಲಗೌಡ ಪಾಟೀಲ ,
ವಯಾಃ 35 ವರ್ಷ , ಸಾಃ ಕವಲಗಿ

15. ಬಸನಗೌಡ ತಂದೆ ಶ್ರೀಶೈಲಗೌಡ ಪಾಟೀಲ ,
ವಯಾಃ 31 ವರ್ಷ , ಸಾಃ ಕವಲಗಿ

( ಪ್ರತಿನಿಧಿಸುವವರುಃಶ್ರೀ. ಆರ್ .ಬಿ.ಜಿ.ಎನ್ ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 16.12.2014 |
| 2 | ಅಪರಾಧ ವರದಿಯಾದ ದಿನಾಂಕ | 17.12.2014 |

| | | |
|---|---|---|
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | ___ |
| 4 | ಫಿರ್ಯಾದಿಯ ಹೆಸರು | ಸಗರೆಪ್ಪ ತಂದೆ ಚಂದ್ರಾಮಪ್ಪ ಗಡೆದ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 07.07.2022 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 01.07.2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆಯ ಕಲಂ: 323, 324, 504 ಹಾಗೂ 506 ರ ಅಡಿಯಲ್ಲಿ |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿ |

**-:: ತೀರ್ಪು ::-**

ಕೋಲ್ಹಾರ ಪೋಲಿಸ ಪೋಲಿಸ ಸಬ್ ಇನ್ಸಪೆಕ್ಟರರವರು ಆರೋಪಿತರ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ: 323, 324, 504 ಹಾಗೂ 506 ರ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ದಿ: 16-12-2014 ರಂದು ಸಂಜೆ 6-30 ಗಂಟೆಯ ಸಮಯದಲ್ಲಿ ಕೋಲ್ಹಾರ ಪೋಲಿಸ ಠಾಣೆಯ ಹದ್ದಿ ಪೈಕಿ ಕವಲಗಿ ಗ್ರಾಮದ ಚಾಸಾ-1 ರವರ ಮನೆಯ ಮುಂದಿನ ಸಂದಿ ರಸ್ತೆಯ ಮೇಲೆ ಚಾಸಾ-1 ರವರ ಮನೆಯ ಬಾಜು ಒಂದು ಬೀಳ ಜಾಗೆ ಇದ್ದು ಆ ಜಾಗೆಯ ಸಲುವಾಗಿ ಚಾಸಾ-1 ಹಾಗೂ 1 ನೇ ಆರೋಪಿಗೆ ತಕರಾರು ನಡೆದಿದ್ದರಿಂದ ಚಾಸಾ-1 ರವರು ನ್ಯಾಯಾಲಯದಲ್ಲಿ ದಾವೆ ಮಾಡಿದ್ದು, ಇದರಿಂದ ಆರೋಪಿತರು ಸಿಟ್ಟಾಗಿ ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ರಚಿಸಿಕೊಂಡು ಅದರ ಸದಸ್ಯರಾಗಿ ಎಕೋದ್ದೇಶದಿಂದ ಬಂದು ಚಾಸಾ- 1 ರವರಿಗೆ ನ್ಯಾಯಾಲಯದಲ್ಲಿ ದಾವೆ ಯಾಕೆ ಮಾಡಿದ್ದಿ ಅಂತ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆ ಬಡೆ ಮಾಡಿದ್ದು ಹಾಗೂ ಜಗಳ ಬಿಡಿಸಲು ಬಂದ ಚಾಸಾ-1 ರವರ ಹೆಂಡತಿಗೂ ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ ಹಾಗೂ ಚಾಸಾ-1 ರವರಿಗೆ ಕಲ್ಲಿನಿಂದ ಹೊಡೆ ಬಡೆ ಮಾಡಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ ಜೀವದ ಭಯ ಹಾಕಿರುತ್ತಾರೆಂದು ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಮೊದಲು 1 ರಿಂದ 3 ನೇ ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದು. ನಂತರ ಸಹಾಯಕ ಸರಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ: 319 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು. ಸದರಿ ಅರ್ಜಿಯನ್ನು ಪುರಸ್ಕರಿಸಿದ ನಂತರ ಉಳಿದ 4 ರಿಂದ 15 ನೇ ಆರೋಪಿತರನ್ನು ಈ ಪ್ರಕರಣದಲ್ಲಿ ಸೇರ್ಪಡೆಯಾಗಿರುತ್ತಾರೆ. ಈ ಪ್ರಕರಣವು ಚಾಲ್ತಿಯಲ್ಲಿರುವಾಗ 11 ನೇ ಆರೋಪಿತನು ಮೃತಪಟ್ಟಿರುತ್ತಾನೆ. ನಂತರ, ಆರೋಪಣೆ ಸಂಜ್ಞೆಯವನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅಡಿಯಲ್ಲಿ ದೋಷಾರೋಪಣ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿತರ ವಿರುದ್ಧ ದಂಡ ಸಂಹಿತೆಯ ಕಲಂ: 323, 324, 504 ಹಾಗೂ 506 ಸಹ ಕಲಂ: 149 ರ ರಡಿಯಲ್ಲಿ ದೋಷರೋಪಣೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿರುತ್ತದೆ.

4. ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣ ಪತ್ರದಲ್ಲಿ ಒಟ್ಟು 10 ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅವರ ಪೈಕಿ ಪ್ರಾ.ಸಾ-1 ರಿಂದ ಪ್ರಾ.ಸಾ-6 ಎಂದು ವಿಚಾರಣೆ ಮಾಡಲಾಯಿತು. ನಿ.ಪಿ-1 ರಿಂದ ನಿ.ಪಿ-9 ರವರೆಗೆ ದಾಖಲಾತಿಗಳನ್ನು ನಿಶಾನಿಸಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಮಹಜರ ಸಾಕ್ಷಿದಾರರಾದ ಚಾಸಾ-3 ರವರು ಮೃತ ಪಟ್ಟಿರುವುದರಿಂದ ಅವರನ್ನು ವಿಚಾರಣೆಯಿಂದ ಕೈ ಬಿಡಲಾಯಿತು ಹಾಗೂ ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರುಗಳಿಗೆ ಸಾಕಷ್ಟು ಬಾರಿ ಸಾಕ್ಷಿ ಸಮನ್ಸಗಳನ್ನು ಹಾಗೂ ವಾರಂಟಗಳನ್ನು ನೀಡಿದರೂ ಕೂಡ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಹಾಗಾಗಿ ಚಾಸಾ-4 ಮತ್ತು 5 ರವರನ್ನು ವಿಚಾರಣೆಯಿಂದ ಕೈ ಬಿಡಲಾಯಿತು.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಅವರ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿತರು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು ತಮ್ಮ ಪರವಾಗಿ ಯಾವುದೇ ರಕ್ಷಣಾತ್ಮಕ ಸಾಕ್ಷಿಗಳನ್ನಾಗಲೀ ಅಥವಾ

ದಾಖಲೆಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ. ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

6. ಉಭಯ ಪಕ್ಷಗಾರರ ಪರ ವಕೀಲರ ವಾದ-ವಿವಾದಗಳನ್ನು ಆಲಿಸಲಾಯಿತು.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸುತ್ತವೆ:-

<u>ಅಂ ಶ ಗ ಳು</u>

1. ಕೋಲ್ಹಾರ ಪೋಲಿಸ ಠಾಣೆಯ ಹದ್ದಿ ಪೈಕಿ ಕವಲಗಿ ಗ್ರಾಮದ ಚಾಸಾ-1 ರವರ ಮನೆಯ ಮುಂದಿನ ಸಂದಿ ರಸ್ತೆಯ ಮೇಲೆ ಚಾಸಾ-1 ರವರ ಮನೆಯ ಬಾಜು ಒಂದು ಬೀಳ ಜಾಗೆ ಇದ್ದು ಆ ಜಾಗೆಯ ಸಲುವಾಗಿ ಚಾಸಾ-1 ಹಾಗೂ 1 ನೇ ಆರೋಪಿತರಿಗೆ ತಕರಾರು ನಡೆದಿದ್ದರಿಂದ ಚಾಸಾ-1 ಇತನು ನ್ಯಾಯಾಲಯದಲ್ಲಿ ದಾವೆ ಮಾಡಿದ್ದು, ಇದರಿಂದ ಆರೋಪಿತರು ಸಿಟ್ಟಾಗಿ ದಿ: 16-12-2014 ರಂದು ಸಂಜೆ 6-30 ಗಂಟೆಯ ಸಮಯದಲ್ಲಿ ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ರಚಿಸಿಕೊಂಡು ಅದರ ಸದಸ್ಯರಾಗಿ ಎಕೋದ್ದೇಶದಿಂದ ಬಂದು ಚಾಸಾ- 1 ರವರಿಗೆ ನ್ಯಾಯಾಲಯುದಲ್ಲಿ ದಾವೆ ಯಾಕೆ ಮಾಡಿದಿ ಅಂತ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಹಾಗಾಗಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ: 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

2. ಅದೇ ರೀತಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ , ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ರಚಿಸಿಕೊಂಡು ಅದರ ಸದಸ್ಯರಾಗಿ ಎಕೋದ್ದೇಶದಿಂದ ಬಂದು ಚಾಸಾ- 1 ರವರಿಗೆ ನ್ಯಾಯಾಲಯದಲ್ಲಿ ದಾವೆ ಯಾಕೆ ಮಾಡಿದಿ ಅಂತ ಜಗಳ ತೆಗೆದು ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ. ಹಾಗಾಗಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ: 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

3. ಅದೇ ರೀತಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ರಚಿಸಿಕೊಂಡು ಅದರ ಸದಸ್ಯರಾಗಿ ಏಕೋದ್ದೇಶದಿಂದ ಬಂದು ಚಾಸಾ- 1 ರವರಿಗೆ ನ್ಯಾಯಾಲಯದಲ್ಲಿ ದಾವೆ ಯಾಕೆ ಮಾಡಿದ್ದಿ ಅಂತ ಜಗಳ ತೆಗೆದು ಚಾಸಾ-1 ರವರಿಗೆ ಕಲ್ಲಿನಿಂದ ಹೊಡೆ ಬಡೆ ಮಾಡಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಹಾಗಾಗಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ಸಹ ಕಲಂ: 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

4. ಅದೇ ರೀತಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ರಚಿಸಿಕೊಂಡು ಅದರ ಸದಸ್ಯರಾಗಿ ಏಕೋದ್ದೇಶದಿಂದ ಬಂದು ಬಂದು ಚಾಸಾ- 1 ರವರ ಕೂಡ ಜಗಳ ತೆಗೆದು ಹೊಡೆ ಬಡೆ ಮಾಡಿ ಜೀವದ ಬೆದರಿಕೆಯನ್ನು ಹಾಕಿರುತ್ತಾರೆ. ಹಾಗಾಗಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ: 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತ ವಾಗಿ ಸಾಬೀತು ಪಡಿಸಿದ್ದಾರೆಯೇ?

5. ಹಾಗಿದ್ದರೆ ಯಾವ ಆಜ್ಞೆ?

8. ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೇ:-

ಅಂಶ ಸಂಖ್ಯೆ -1:ನಕಾರಾತ್ಮಕವಾಗಿ

ಅಂಶ ಸಂಖ್ಯೆ -2:ನಕಾರಾತ್ಮಕವಾಗಿ

ಅಂಶ ಸಂಖ್ಯೆ -3:ನಕಾರಾತ್ಮಕವಾಗಿ

ಅಂಶ ಸಂಖ್ಯೆ -4:ನಕಾರಾತ್ಮಕವಾಗಿ

ಅಂಶ ಸಂಖ್ಯೆ -5:ಅಂತಿಮ ಆದೇಶದಂತೆ.

-: <u>ಕಾ ರ ಣ ಗ ಳು</u> :-

**9**. <u>ಅಂಶ ಸಂಖ್ಯೆ **-1** ರಿಂದ **4** :</u> ಈ ಎಲ್ಲಾ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಎಲ್ಲಾ ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

10. ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ದೋಷಾರೋಪಣಾ ಪಟ್ಟಿಯಲ್ಲಿ ಚಾಸಾ.1 ರಿಂದ 10 ರವರನ್ನು ಸಾಕ್ಷಿದಾರರನ್ನಾಗಿ ನಮೂದಿಸಿರುತ್ತಾರೆ. ಅವರುಗಳಲ್ಲಿ ಪ್ರಾಸಾ.1 ರಿಂದ 6 ಎಂದು ಸಾಕ್ಷಿಗಳನ್ನಾಗಿ ವಿಚಾರಣೆ ಮಾಡಿರುತ್ತಾರೆ. ಅಂತೆಯೇ ಅಭಿಯೋಜನೆಯವರು ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ ಪಿ.01 ರಿಂದ ನಿಶಾನೆ ಪಿ.9 ರವರೆಗೆ ದಾಖಲಾತಿಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ.

11. ಈ ಪ್ರಕರಣದಲ್ಲಿ ಸ್ಥಳ ಮಹಜರ ಸಾಕ್ಷಿದಾರರಾದ ಚಾಸಾ-2 ರವರನ್ನು ಪ್ರಾ.ಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1 ರವರು ತನಗೆ ಗೊತ್ತಿಲ್ಲ. ನಿಪಿ-1 ರ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಜಗಳದ ಬಗ್ಗೆ ತಾನು ಯಾವುದೇ ಗಟನಾ ಸ್ಥಳಕ್ಕೆ ಹೋಗಿಲ್ಲ. ತನ್ನನ್ನು ಬೀಟಿಗೆ ಬರುವ ಪೋಲಿಸರು ಪಂಚರಾಗಲು ಹೇಳಿ, ತಾನು ಚಹಾದ ಅಂಗಡಿಯಲ್ಲಿರುವಾಗ ಕಾಗದದ ಮೇಲೆ ತನ್ನ ಸಹಿ ಪಡೆದರು . ಪೋಲಿಸರ ಹೇಳಿಕೆ ಮೇರೆಗೆ ತಾನು ಸಹಿ ಮಾಡಿರುತ್ತೇನೆ. ತನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತರಲು ಸಾಧ್ಯವಾಗಿರುವುದಿಲ್ಲ.

12. ಈ ಪ್ರಕರಣದಲ್ಲಿ ದೂರುದಾರರು ಮತ್ತು ಗಾಯಾಳು ಸಾಕ್ಷಿದಾರರಾದ ಚಾಸಾ- 1 ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-4 ತನ್ನ ಹೆಂಡತಿ. ಚಾಸಾ-5 ತನ್ನ ಮಗಳು. ಚಾಸಾ-6 ಮತ್ತು 7 ತನ್ನಗೆ ಪರಿಚಯದವರು. ಕವಲಗಿ ಗ್ರಾಮದಲ್ಲಿ ತಮ್ಮದು ಒಂದು ಖುಲ್ಲಾ ಜಾಗ ಇತ್ತು. ನಂತರ ಆರೋಪಿತರು ಸದರಿ ಜಾಗೆಯನ್ನು ತಮ್ಮದು ಎಂದು ಕಾರಣ ಅವರ ಮೇಲೆ ತಾನು ಸಿವಿಲ್ ದಾವೆಯನ್ನು ಹೂಡಿದ್ದೆ. ದಿನಾಂಕ:16.12.2014 ರಂದು ಸದರಿ ಆರೋಪಿತರು ಸಾಯಂಕಾಲ 6.30 ಗಂಟೆಗೆ ತಮ್ಮ ಮನೆಗೆ ಬಂದು ಸಿವಿಲ್ ದಾವೆಯನ್ನು ಯಾಕೆ ಹೂಡಿದ್ದೀರಿ ಎಂದು ಜಗಳ ತೆಗೆದರು. 1 ನೇ ಆರೋಪಿತರ ಜೊತೆಗೆ ದುಂಡಪ್ಪ ಹಣಮಂತ ಪೂಜಾರಿ, ಮುದ್ದಪ್ಪ ಪೂಜಾರಿ, ಬಸವ್ವ ಪೂಜಾರಿ, ಕಾಶೀಬಾಯಿ ಪೂಜಾರಿ, ಸಾವಿತ್ರಿ ಪೂಜಾರಿ, ರಂಗಪ್ಪ ಶಿವಪ್ಪ ಪೂಜಾರಿ, ಪ್ರಕಾಶ ನಿಡಗುಂದಿ, ಯಲ್ಲಪ್ಪ ಗಡೇದ, ಸುಸಲ ಗಡೇದ, ಶ್ರೀಶೈಲಗೌಡ ಪಾಟೀಲ, ರಾಜುಗೌಡ ಪಾಟೀಲ,

ಮತ್ತು ಬಸನಗೌಡ ಪಾಟೀಲ ಎಲ್ಲರೂ ಸೇರಿ ತನಗೆ ಅವಾಚ್ಯವಾಗಿ ಬೈದು ಮನೆಯಿಂದ ಹೊರಗೆ ಕರೆದಿರುತ್ತಾರೆ. ತಾನು ಏಕೆ ಜಗಳ ಮಾಡುತ್ತಿದ್ದೀರಿ ಎಂದು ವಿಚಾರಿಸಲಾಗಿ 3 ಜನ ಆರೋಪಿತರು ತನಗೆ ಕಲ್ಲಿನಿಂದ ಮತ್ತು ಬಡಿಗೆಯಿಂದ ಬಲಗಾಲಿಗೆ, ಎರಡು ಬುಜಕ್ಕೆ, ಬೆನ್ನಿಗೆ ತನ್ನ ಹೆಡಕಿಗೆ ಹೊಡೆದಿರುತ್ತಾರೆ. ಆಗ ಚಾಸಾ-4 ಮತ್ತು 5 ರವರು ಸದರಿ ಜಗಳವನ್ನು ಬಿಡಿಸಲು ಬಂದರು. ಚಾಸಾ-4 ಮತ್ತು 5 ರವರಿಗೆ ಕಾಶೀಬಾಯಿ ಹಾಗೂ ಸಾವಿತ್ರಿರವರು ಹೊಡೆದರು. ನಂತರ ಚಸಾ-6 ಮತ್ತು 7 ರವರು ಸದರಿ ಜಗಳವನ್ನು ಬಿಡಿಸಿದರು. ತಮಗೆ ಗಾಯ ಪೇಟ್ಟುಗಾಳಾಗಿದ್ದರಿಂದ ವಿಜಯಪುರದ ಆಸ್ಪತ್ರೆಗೆ ಹೋದೇವು. ನಂತರ ಸದರಿ ಆಸ್ಪತ್ರೆಯಲ್ಲಿ ಪೊಲೀಸರು ತಮ್ಮ ಹೇಳಿಕೆ ದೂರನ್ನು ಪಡೆದರು ಎಂದು ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ.

13. ಈ ಪ್ರಕರಣದಲ್ಲಿ ಪ್ರತ್ಯಕ್ಷ್ಯ ಮತ್ತು ಗಲಾಟೆ ಬಿಡಿಸಿರುವ ಕುರಿತು ಸಾಕ್ಷಿದಾರರಾದ ಚಾಸಾ-6 ರವರನ್ನು ಪ್ರಾ.ಸಾ-3 ಎಂದು ಮತ್ತು ಚಾಸಾ-7 ರವರನ್ನು ಪ್ರಾ.ಸಾ-4 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-1 ಮತ್ತು 4 ರವರೊಂದಿಗೆ ಯಾವುದೇ ಗಲಾಟೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೇದರಿಕೆ ಹಾಕಿರುವುದಿಲ್ಲ. ಅದೇ ರೀತಿಯಾಗಿ ಆರೋಪಿತರು ಚಾಸಾ-1 ಮತ್ತು 4 ರವರಿಗೆ ಕೈಯಿಂದ ಮತ್ತು ಯಾವುದೇ ವಸ್ತುವಿನಿಂದ ಹಲ್ಲೇ ಮಾಡಿರುವುದಿಲ್ಲ ಹಾಗೂ ತಾವು ಪೋಲಿಸರು ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತರಲು ಸಾಧ್ಯವಾಗಿರುವುದಿಲ್ಲ.

14. ಈ ಪ್ರಕರಣದಲ್ಲಿ ವೈದ್ಯಾಧಿಕಾರಿ ಸಾಕ್ಷಿದಾರರಾದ ಚಾಸಾ-8 ರವರನ್ನು ಪ್ರಾ.ಸಾ-5 ಎಂದು ವಿಚಾರಣೆಗೆ ಒಳಪಡಿಸಿದ್ದು,ದಿನಾಂಕ: 17.02.2014 ರಂದು ಮಧ್ಯಾಹ್ನ 12.35 ಗಂಟೆಗೆ ಚಾಸಾ-1 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ತನ್ನ ಮುಂದೆ ಹಾಜರಾಗಿದ್ದು, ಅವರನ್ನು ಪರಿಕ್ಷಿಸಿದಾಗ, ಎದೆಯ ಭಾಗದಲ್ಲಿ ನೋವಿನ ಅನುಭವ, ಬೆನ್ನಿನ ಹಿಂಭಾಗದಲ್ಲಿ ನೋವಿನ ಅನುಭವ, ಎರಡು ಬುಜಗಳಲ್ಲಿ ನೋವಿನ ಅನುಭವ, ಬಲ ಕಾಲಿನಲ್ಲಿ ನೋವಿನ ಅನುಭವ, ನಂತರ ತಾನು ಚಾಸಾ-1 ರವನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು,

ಸದರಿ ಚಾಸಾ-1 ರವರು ಎಕ್ಸ್ ರೇ ನ್ನು ತಂದು ಹಾಜರುಪಡಿಸಿದ್ದು, ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-1 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ. ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ತಾನು ನಿಪಿ-5 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ನಿಪಿ-5 ರಲ್ಲಿ ನಮೂದಿಸಿದ ಗಾಯಗಳು ಗಟ್ಟಿಯಾದ ಮತ್ತು ಮೊಂಡವಾದ ವಸ್ತುವಿನಿಂದ ಹಲ್ಲೇ ಮಾಡಿದಾಗ ಆಗುತ್ತದೆ ಎಂದು ನುಡಿದಿರುತ್ತಾರೆ .

15. ಮುಂದುವರೆದು, ಅದೇ ದಿನ ಮಧ್ಯಾಹ್ನ 12.25 ಗಂಟೆಗೆ ಚಾಸಾ-4 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ತನ್ನ ಮುಂದೆ ಹಾಜರಾಗಿದ್ದು, ಅವರನ್ನು ಪರಿಕ್ಷಿಸಿದಾಗ, ಬೆನ್ನಿನಲ್ಲಿ ನೋವಿನ ಅನುಭವ, ಹೊಟ್ಟೆಯ ಮೇಲ್ಭಾಗದಲ್ಲಿ ನೋವಿನ ಅನುಭವ, ಎಡ ಬುಜ ಮತ್ತು ಎಡಗೈಯಲ್ಲಿ ನೋವಿನ ಅನುಭವ ಇದ್ದು ನಂತರ ತಾನು ಚಾಸಾ-4 ರವನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು, ಸದರಿ ಚಾಸಾ-4 ರವರು ಎಕ್ಸ್ ರೇ ನ್ನು ತಂದು ಹಾಜರುಪಡಿಸಿದ್ದು, ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-4 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ. ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ತಾನು ನಿಪಿ-6 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ನಿಪಿ-6 ರಲ್ಲಿ ನಮೂದಿಸಿದ ಗಾಯಗಳು ಗಟ್ಟಿಯಾದ ಮತ್ತು ಮೊಂಡವಾದ ವಸ್ತುವಿನಿಂದ ಹಲ್ಲೇ ಮಾಡಿದಾಗ ಆಗಿರುತ್ತವೆ. ನಿಪಿ-5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಮು.ಮಾ-1 ಮತ್ತು 2 ಕಲ್ಲುಗಳಿಂದ ಹಲ್ಲೇ ಮಾಡಿದಾಗ ಆಗುವ ಸಾದ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

16. ಈ ಪ್ರಕರಣದಲ್ಲಿ ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ-10 ರವರನ್ನು ಪ್ರಾ.ಸಾ-6 ಎಂದು ವಿಚಾರಣೆಗೆ ಒಳಪಡಿಸಿದ್ದು, ದಿ: 17.12.2014 ರಂದು ಸಂಜೆ 8.30 ಗಂಟೆಗೆ ತಾನು ಎಸ್.ಎಚ್.ಓ ಕರ್ತವ್ಯದಲ್ಲಿದ್ದಾಗ ಚಾಸಾ-9 ರವರು ಹೇಳಿಕೆಯ ದೂರನ್ನು ತಂದು ಹಾಜರು ಪಡಿಸಿದ್ದು, ಸದರಿ ಹೇಳಿಕೆ ದೂರಿನ ಮೇಲೆ ತಮ್ಮ ಠಾಣಾ ಗುನ್ನಾ ನಂ.208/2014 ರಂತೆ ದಾಖಲಿಸಿಕೊಂಡು ಸದರಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ದಿನಾಂಕ;18.12.2014 ರಂದು ಬೆಳಿಗ್ಗೆ 9.30 ರಿಂದ 10.30 ಗಂಟೆಯವರೆಗೆ ಚಾಸಾ-6 ರವರು ತೋರಿಸಿದಂತೆ ಚಾಸಾ-1 ರವರ ಮನೆಯ ಮುಂದೆ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಸ್ಥಳ ಮಹಜರನ್ನು ನಿಪಿ-1 ರಂತೆ ಜರುಗಿಸಿ ಮಹಜರ ಕಾಲದಲ್ಲಿ ಚಾಸಾ-6 ರವರು ಹಾಜರು ಪಡಿಸಿದ ಹಿಡಗೈ ಅಳತೆಯ ಎರಡು

ಕಲ್ಲುಗಳನ್ನು ತಾನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-5 ರಿಂದ 7 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ .ಅದೇ ದಿನ ತಾನು ವಿಜಯಪುರದ ಸರ್ಕಾರಿ ಆಸ್ಪತ್ರೆ ಭೇಟ್ಟಿ ನೀಡಿ ಚಾಸಾ-4 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ:22.12.2014 ರಂದು ತಮ್ಮ ಸಿಬ್ಬಂದಿಗಳಿಗೆ ಆರೋಪಿತರ ಪತ್ತೆಗಾಗಿ ನೇಮಿಸಿದ್ದು, ಸದರಿ ತಮ್ಮ ಸಿಬ್ಬಂದಿಗಳು ಆರೋಪಿತರು ಪತ್ತೆಯಾಗಿರುವುದಿಲ್ಲ ಎಂದು ತನಗೆ ವರದಿ ಕೊಟ್ಟಿರುತ್ತಾರೆ. ದಿನಾಂಕ:07.01.2015 ರಂದು ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ನೀಡುವಂತೆ ಚಾಸಾ-8 ರವರಿಗೆ ಕೋರಿಕೆ ಪ್ರತವನ್ನು ಬರೆದಿರುತ್ತೇನೆ. ದಿನಾಂಕ:10.03.2015 ರಂದು ಚಾಸಾ-8 ರವರಿಂದ ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಈ ಪಕ್ರರಣದಲ್ಲಿ ಸಾಕಷ್ಟು ಸಾಕ್ಷ್ಯಾಧಾರರುಗಳು ಕಂಡು ಬಂದಿರುವುದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

17. ಅಭಿಯೋಜನೆಯ ಪರವಾಗಿ ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಕೆಳಕಂಡಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೇ-

ನಿಪಿ.1 ರಂತೆ ಸ್ಥಳ ಮಹಜರನ್ನು, ನಿಪಿ-2 ರಂತೆ ದೂರನ್ನು , ನಿಪಿ-3 ಮತ್ತು 4 ರಂತೆ ಪ್ರಾ.ಸಾ-3 ಮತ್ತು 4 ರವರು ಅಲ್ಲಗಳೆದ ಹೇಳಿಕೆಯ ಭಾಗಗಳನ್ನು, ನಿಪಿ-5 ಮತ್ತು 6 ರಂತೆ ಗಾಯ ಪ್ರಮಾಣ ಪತ್ರಗಳನ್ನು, ನಿಪಿ-7 ರಂತೆ ಪ್ರಥಮ ವರ್ತಮಾನ ವರದಿಯನ್ನು ಹಾಗೂ ನಿಪಿ-8 ಮತ್ತು 9 ರಂತೆ ಎರಡು ವರದಿಗಳನ್ನು ಹಾಜರುಪಡಿಸಿರುತ್ತಾರೆ.

18. ಈ ಮೇಲ್ಕಂಡ ಅಭಿಯೋಜನೆಯ ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ದಿ: 16-12-2014 ರಂದು ಸಂಜೆ 6-30 ಗಂಟೆಯ ಸಮಯದಲ್ಲಿ ಕೋಲ್ಹಾರ ಪೋಲಿಸ ಠಾಣೆಯ ಹದ್ದಿ ಪೈಕಿ ಕವಲಗಿ ಗ್ರಾಮದ ಚಾಸಾ-1 ರವರ ಮನೆಯ ಮುಂದಿನ ಸಂದಿ ರಸ್ತೆಯ ಮೇಲೆ ಚಾಸಾ-1 ರವರ ಮನೆಯ ಬಾಜು ಒಂದು ಬೀಳ ಜಾಗೆ ಇದ್ದು ಆ ಜಾಗೆಯ ಸಲುವಾಗಿ ಚಾಸಾ-1 ಹಾಗೂ 1 ನೇ ಆರೋಪಿಗೆ ತಕರಾರು ನಡೆದಿದ್ದರಿಂದ

ಚಾಸಾ-1 ರವರು ನ್ಯಾಯಾಲಯದಲ್ಲಿ ದಾವೆ ಮಾಡಿದ್ದು, ಇದರಿಂದ ಆರೋಪಿತರು ಸಿಟ್ಟಾಗಿ ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ರಚಿಸಿಕೊಂಡು ಅದರ ಸದಸ್ಯರಾಗಿ ಏಕೋದ್ದೇಶದಿಂದ ಬಂದು ಚಾಸಾ- 1 ರವರಿಗೆ ನ್ಯಾಯಾಲಯದಲ್ಲಿ ದಾವೆ ಯಾಕೆ ಮಾಡಿದ್ದಿ ಅಂತ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆ ಬಡೆ ಮಾಡಿದ್ದು ಹಾಗೂ ಜಗಳ ಬಿಡಿಸಲು ಬಂದ ಚಾಸಾ-1 ರವರ ಹೆಂಡತಿಗೂ ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ ಹಾಗೂ ಚಾಸಾ-1 ರವರಿಗೆ ಕಲ್ಲಿನಿಂದ ಹೊಡೆ ಬಡೆ ಮಾಡಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ ಜೀವದ ಭಯ ಹಾಕಿರುತ್ತಾರೆಂದು ಆರೋಪಿಸಲಾಗಿರುತ್ತದೆ.

19. ಕ್ರಿಮಿನಲ್ ಪ್ರಕರಣಗಳಲ್ಲಿನ ರುಜುವಾತಿನ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿರುತ್ತದೆ. ಸದರಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳ ಕುರಿತು ಸಂಶಯಾತೀತವಾಗಿ ರುಜುವಾತು ಪಡಿಸಬೇಕಾಗುತ್ತದೆ. ಈ ಕುರಿತು ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿರುವ ಪ್ರಾ.ಸಾ- 2 ರಿಂದ 4 ರವರ ಸಾಕ್ಷ್ಯವನ್ನು ಪರಿಶೀಲಿಸುವುದ ಅತ್ಯವಶ್ಯಕವಾಗಿರುತ್ತದೆ.

20. ಈ ಪ್ರಕರಣದಲ್ಲಿ ದೂರುದಾರರು ಮತ್ತು ಗಾಯಾಳು ಸಾಕ್ಷಿದಾರರಾದ ಪ್ರಾ.ಸಾ2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ತನ್ನ ಮತ್ತು ಚಾಸಾ5 ಮತ್ತು 6 ರವರೊಂದಿಗೆ ಜಗಳ ತೆಗೆದಿರುವ ಕುರಿತು , ಅವಾಚ್ಯ ಶಬ್ದಗಳಿಂದ ಬೈದಿರುವ ಕುರಿತು, ಮೂರು ಜನ ಆರೋಪಿತರು ತನಗೆ ಕಲ್ಲಿನಿಂದ, ಬಡಿಗೆಯಿಂದ ಬಲಗಾಲಿಗೆ ಎರಡು ಬುಜಕ್ಕೆ, ಬೆನ್ನಿಗೆ ತನ್ನ ಹೆಡಕಿಗೆ ಹೊಡೆದಿರುತ್ತಾರೆ. ಚಾಸಾ-4 ಮತ್ತು 5 ರವರಿಗೆ ಕಾಶೀಬಾಯಿ ಮತ್ತು ಸಾವಿತ್ರಿ ಹೊಡೆದರು ಮತ್ತು ಆರೋಪಿತರು ತಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ.

21. ಸದರಿ ಪ್ರಾ.ಸಾ-2 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಆರೋಪಿತರ ವಿರುದ್ದ ಸಲ್ಲಿಸಿರುವ ಅಸಲು ದಾವೆಯು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ತಾನು ನೋಡಿಲ್ಲ ಎಂದು ಹೇಳುತ್ತಾರೆ. ಆರೋಪಿತರಿಗೂ ಮತ್ತು ತಮಗೂ ಮೊದಲಿನಿಂದಲೂ ವೈ ಮನಸ್ಸು ಇರುತ್ತದೆ ಎಂದರೆ ಸಾಕ್ಷಿಯು ಜಾಗದ ಸಲುವಾಗಿ ತಮಗೂ ಮತ್ತು ಆರೋಪಿತರಿಗೂ ವೈಮನಸ್ಸು ಇರುತ್ತದೆ ಎಂದು ಹೇಳುತ್ತಾರೆ. 2 ನೇ ಆರೋಪಿಯು ತನಗೆ ಅವಾಚ್ಯವಾಗಿ ಬೈದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 1 ನೇ ಆರೋಪಿತನು ಉಳಿದ ಆರೋಪಿತರನ್ನು ಕರೆಯಿಸಿ ಎಲ್ಲರೂ ಕೂಡಿ ತನಗೆ ಹೊಡೆದಿರುತ್ತಾರೆ ಎಂದು ಸುಳ್ಳು

ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ . 1 ನೇ ಆರೋಪಿಯು ತಮ್ಮ ಮನೆಯ ಹತ್ತಿರ ದಿ: 16-12-2014 ರಂದು ಸಂಜೆ 6-30 ಗಂಟೆಗೆ ಬಂದಿರುತ್ತಾನೆ . ಅದೇ ರೀತಿಯಾಗಿ ಉಳಿದ ಆರೋಪಿತರು ಕೂಡ ತಕ್ಷಣವೇ ಬಂದಿರುತ್ತಾರೆ. ಈ ಕುರಿತು ತಾನು ನಿಪಿ2 ರ ದೂರಿನಲ್ಲಿ ಬರೆಸಿರುತ್ತೇನೆ ಎಂದು ನುಡಿದಿರುತ್ತಾರೆ.

22. ಈ ಪ್ರಕರಣದಲ್ಲಿ ಗಾಯಾಳು ಮತ್ತು ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾಸಾ- 4 ಮತ್ತು 5 ರವರುಗಳು ನ್ಯಾಯಾಲಯಕ್ಕೆ ಬಂದು ಪ್ರಾಸಾ-2 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೇ ಇರುವುದು ಅಭಿಯೋಜನೆ ಪ್ರಕರಣದ ಕುರಿತು ಸಂಶಯವನ್ನುಂಟು ಮಾಡುತ್ತದೆ.

23. ಅದೇ ರೀತಿಯಾಗಿ ಈ ಪ್ರಕರಣದ ಪ್ರತ್ಯಕ್ಷ್ಯ ಮತ್ತು ಗಲಾಟೆ ಬಿಡಿಸಿರುವ ಕುರಿತು ಸಾಕ್ಷಿದಾರರಾದ ಪ್ರಾ.ಸಾ.3 ಮತ್ತು 4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-1 ಮತ್ತು 4 ರವರೊಂದಿಗೆ ಯಾವುದೇ ಗಲಾಟೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲಮತ್ತು ಪ್ರಾಣ ಬೇದರಿಕೆ ಹಾಕಿರುವುದಿಲ್ಲ. ಅದೇ ರೀತಿಯಾಗಿ ಆರೋಪಿತರು ಚಾಸಾ-1 ಮತ್ತು 4 ರವರಿಗೆ ಕೈಯಿಂದ ಮತ್ತು ಯಾವುದೇ ವಸ್ತುವಿನಿಂದ ಹಲ್ಲೇ ಮಾಡಿರುವುದಿಲ್ಲ ಹಾಗೂ ತಾವು ಪೋಲಿಸರು ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಸದರಿ ಪ್ರಾ.ಸಾ-3 ಮತ್ತು 4 ರವರ ಸಾಕ್ಷ್ಯವು ಅಭಿಯೋಜನೆಗೆ ಪ್ರಕರಣಕ್ಕೆ ಯಾವುದೇ ಸಹಾಯಕಾರಿಯಾಗಿರುವುದಿಲ್ಲ.

24. ಈ ಮೇಲಿನ ಪ್ರಾಸಾ-2 ರಿಂದ 4 ರವರ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಪ್ರಾಸಾ-2 ರವರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದರೆ ಸ್ವತಂತ್ರ್ಯ ಸಾಕ್ಷಿದಾರರಾದ ಪ್ರಾಸಾ-3 ಮತ್ತು 4 ರವರು ಪ್ರಾಸಾ-2 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೇ ಅಭಿಯೋಜನೇ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅದೇ ರೀತಿಯಾಗಿ ಗಾಯಾಳು ಮತ್ತು ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರು ನ್ಯಾಯಾಲಯಕ್ಕೆ ಬಂದು ಪ್ರಾಸಾ-2 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಪ್ರಾಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯಕ್ಕೂ ಮತ್ತು ಮತ್ತು ತಮ್ಮ ಪಾಟೀ ಸವಾಲಿನಲ್ಲಿ ನುಡಿದಿರುವ ಸಾಕ್ಷ್ಯಕ್ಕೂ ವ್ಯತೀರಿಕ್ತತೆ ಇರುತ್ತದೆ. ಪ್ರಾಸಾ-2 ರವರು ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿರುವುದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ

ಸಾಕ್ಷಿದಾರರ ಸಮರ್ಥನೆ ಇಲ್ಲದೇ ಪ್ರಾಸಾ-2 ರವರ ಸಾಕ್ಷ್ಯದ ಕುರಿತು ನ್ಯಾಯಾಲಯಕ್ಕೆ ಸಂಶಯವನ್ನುಂಟು ಮಾಡುತ್ತದೆ.

**25**. ಮಾನ್ಯ ಆರೋಪಿತರ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಪ್ರಾ.ಸಾ.2 ರಿಂದ 5 ರವರುಗಳ ಸಾಕ್ಷ್ಯಗಳಲ್ಲಿ ಪ್ರಾಸಾ-1 ರವರಿಗೆ ಆದ ಗಾಯಗಳ ಕುರಿತು ಸಾಕಷ್ಟು ವ್ಯತ್ಯಾಸ ಮತ್ತು ವ್ಯತಿರಿಕ್ತವಾದ ಹೇಳಿಕೆಗಳನ್ನು ನುಡಿದಿರುತ್ತಾರೆ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದ ಮಂಡನೆಯಲ್ಲಿ ಆರೋಪಿತರ ಪರ ವಕೀಲರು ವಾದ ಮಂಡನೆಯನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು ಸದರಿ ಪ್ರಾ.ಸಾ.2 ರಿಂದ 5 ರವರ ಸಾಕ್ಷ್ಯಗಳನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

**26**. ಪ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ 3 ಜನ ಆರೋಪಿತರು ತನಗೆ ಕಲ್ಲಿನಿಂದ ಮತ್ತು ಬಡಿಗೆಯಿಂದ ಬಲಗಾಲಿಗೆ, ಎರಡು ಬುಜಕ್ಕೆ, ಬೆನ್ನಿಗೆ ತನ್ನ ಹೆಡಕಿಗೆ ಹೊಡೆದಿರುತ್ತಾರೆ. ಆಗ ಚಾಸಾ-4 ಮತ್ತು 5 ರವರು ಸದರಿ ಜಗಳವನ್ನು ಬಿಡಿಸಲು ಬಂದರು. ಚಾಸಾ-4 ಮತ್ತು 5 ರವರಿಗೆ ಕಾಶೀಬಾಯಿ ಹಾಗೂ ಸಾವಿತ್ರಿರವರು ಹೊಡೆದರು. ನಂತರ ಚಾಸಾ-6 ಮತ್ತು 7 ರವರು ಸದರಿ ಜಗಳವನ್ನು ಬಿಡಿಸಿದರು. ತಮಗೆ ಗಾಯ ಪೇಟ್ಟುಗಾಳಾಗಿದ್ದರಿಂದ ವಿಜಯಪುರದ ಆಸ್ಪತ್ರೆಗೆ ಹೋದೇವು ಎಂದು ನುಡಿದಿರುತ್ತಾರೆ. ಪ್ರಾ.ಸಾ.3 ಮತ್ತು 4 ರವರು ತಮ್ಮ ಸಾಕ್ಷ್ಯಗಳಲ್ಲಿ ಪ್ರಾಸಾ-1, ಚಾಸಾ-4 ಹಾಗೂ 5 ರವರಿಗೆ ಗಾಯಗಳಾದ ಕುರಿತು ಸಾಕ್ಷ್ಯವನ್ನು ನುಡಿದಿರುವುದಿಲ್ಲ.

27. ವೈದ್ಯಾಧಿಕಾರಿಗಳಾದ ಪ್ರಾ.ಸಾ.5 ರವರು ತಮ್ಮ ಸಾಕ್ಷ್ಯದಲ್ಲಿ ಚಾ.ಸಾ.1 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ದಿ: 17.02.2014 ರಂದು ಮಧ್ಯಾಹ್ನ 12.35 ಗಂಟೆಗೆ ಚಾಸಾ-1 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ತನ್ನ ಮುಂದೆ ಹಾಜರಾಗಿದ್ದು, ಅವರನ್ನು ಪರಿಕ್ಷಿಸಿದಾಗ, ಎದೆಯ ಭಾಗದಲ್ಲಿ ನೋವಿನ ಅನುಭವ, ಬೆನ್ನಿನ ಹಿಂಭಾಗದಲ್ಲಿ ನೋವಿನ ಅನುಭವ, ಎರಡು ಬುಜಗಳಲ್ಲಿ ನೋವಿನ ಅನುಭವ, ಬಲ ಕಾಲಿನಲ್ಲಿ ನೋವಿನ ಅನುಭವ, ನಂತರ ನಾನು ಚಾಸಾ-1 ರವನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು, ಸದರಿ ಚಾಸಾ-1 ರವರು ಎಕ್ಸ್ ರೇ ನ್ನು ತಂದು ಹಾಜರುಪಡಿಸಿದ್ದು, ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-1 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ. ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ತಾನು ನಿಪಿ-5 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ನಿಪಿ-5 ರಲ್ಲಿ ನಮೂದಿಸಿದ ಗಾಯಗಳು

ಗಟ್ಟಿಯಾದ ಮತ್ತು ಮೊಂಡವಾದ ವಸ್ತುವಿನಿಂದ ಹಲ್ಲೇ ಮಾಡಿದಾಗ ಆಗುತ್ತದೆ ಎಂದು ನುಡಿದಿರುತ್ತಾರೆ. ಅದೇ ದಿನ ಮಧ್ಯಾಹ್ನ 12.25 ಗಂಟೆಗೆ ಚಾಸಾ-4 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ತನ್ನ ಮುಂದೆ ಹಾಜರಾಗಿದ್ದು, ಅವರನ್ನು ಪರಿಕ್ಷಿಸಿದಾಗ, ಬೆನ್ನಿನಲ್ಲಿ ನೋವಿನ ಅನುಭವ, ಹೊಟ್ಟೆಯ ಮೇಲ್ಭಾಗದಲ್ಲಿ ನೋವಿನ ಅನುಭವ, ಎಡ ಬುಜ ಮತ್ತು ಎಡಗೈಯಲ್ಲಿ ನೋವಿನ ಅನುಭವ ಇದ್ದು ನಂತರ ತಾನು ಚಾಸಾ-4 ರವನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು, ಸದರಿ ಚಾಸಾ-4 ರವರು ಎಕ್ಸ್ ರೇ ನ್ನು ತಂದು ಹಾಜರುಪಡಿಸಿದ್ದು, ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-4 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ. ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ತಾನು ನಿಪಿ-6 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ನಿಪಿ-6 ರಲ್ಲಿ ನಮೂದಿಸಿದ ಗಾಯಗಳು ಗಟ್ಟಿಯಾದ ಮತ್ತು ಮೊಂಡವಾದ ವಸ್ತುವಿನಿಂದ ಹಲ್ಲೇ ಮಾಡಿದಾಗ ಆಗಿರುತ್ತವೆ. ನಿಪಿ-5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಮು.ಮಾ-1 ಮತ್ತು 2 ಕಲ್ಲುಗಳಿಂದ ಹಲ್ಲೇ ಮಾಡಿದಾಗ ಆಗುವ ಸಾದ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ.

**28**. ಈ ಮೇಲಿನ ಪ್ರಾ.ಸಾ.2 ರಿಂದ 5 ರವರ ಸಾಕ್ಷ್ಯ ಮತ್ತು ನಿಶಾನೆ ಪಿ.5 ಮತ್ತು 6 ರ ಗಾಯದ ಪ್ರಮಾಣ ಪತ್ರಗಳನ್ನು ಪರಿಶೀಲಿಸಿದಾಗ ಪ್ರಾ.ಸಾ.5 ರವರು ತಮ್ಮ ಸಾಕ್ಷ್ಯದಲ್ಲಿ ಪ್ರಾ.ಸಾ.2 ರವರು ದಿನಾಂಕಃ 17.02.2014 ರಂದು ಮಧ್ಯಾಹ್ನ 12-35 ಗಂಟೆಗೆ_ತನ್ನ ಹತ್ತಿರ ಚಿಕಿತ್ಸೆಯನ್ನು ಪಡೆದಿರುತ್ತಾರೆ ಮತ್ತು ಸದರಿಯವರಿಗೆ ಎದೆಯ ಭಾಗದಲ್ಲಿ ನೋವಿನ ಅನುಭವ, ಬೆನ್ನಿನ ಹಿಂಭಾಗದಲ್ಲಿ ನೋವಿನ ಅನುಭವ, ಎರಡು ಬುಜಗಳಲ್ಲಿ ನೋವಿನ ಅನುಭವ, ಬಲ ಕಾಲಿನಲ್ಲಿ ನೋವಿನ ಅನುಭವ, ಚಾಸಾ-5 ರವರಿಗೆ ಬೆನ್ನಿನಲ್ಲಿ ನೋವಿನ ಅನುಭವ, ಹೊಟ್ಟೆಯ ಮೇಲ್ಭಾಗದಲ್ಲಿ ನೋವಿನ ಅನುಭವ, ಎಡ ಬುಜ ಮತ್ತು ಎಡಗೈಯಲ್ಲಿ ನೋವಿನ ಅನುಭವ ಆಗಿರುವುದು ಹಾಗೂ ಈ ಕುರಿತು ತಾನು ನಿಪಿ-5 ಮತ್ತು 6 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದಿರುವುದು ಕಂಡು ಬರುತ್ತದೆ. ಈ ಮೇಲಿನ ಪ್ರಾ.ಸಾ.2 ರಿಂದ 5 ರವರ ಮೌಖಿಕ ಸಾಕ್ಷ್ಯ ಮತ್ತು ನಿಪಿ.5 ಮತ್ತು 6 ರ ದಾಖಲಾತಿಗಳನ್ನು ಪರಿಶೀಲಿಸಿದಾಗ ಸದರಿ ಸಾಕ್ಷಿದಾರರ ಸಾಕ್ಷ್ಯಗಳಲ್ಲಿ ಪ್ರಾಸಾ-2 ರವರಿಗೆ ಗಾಯಗಳಾದ ಕುರಿತು ಒಬ್ಬರಿಗೊಬ್ಬರು ವ್ಯತೀರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ.2 ಮತ್ತು ಚಾಸಾ-4 ರವರು ಪ್ರಾ.ಸಾ.5 ಹತ್ತಿರ ದಿನಾಂಕ 17-02-2014 ರಂದು ತಮ್ಮ

ಹಾಗೂ ಆರೋಪಿತರ ಮಧ್ಯ ಆದ ಗಲಾಟೆಯ ಕುರಿತು ಚಿಕಿತ್ಸೆಯನ್ನು ಪಡೆದ ಬಗ್ಗೆ ಸಂಶಯವನ್ನುಂಟು ಮಾಡುತ್ತದೆ.

29. ಈ ಮೇಲಿನ ಪ್ರಾ.ಸಾ.2 ಮತ್ತು 6 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಆರೋಪಿತರು ಮತ್ತು ಪ್ರಾ.ಸಾ1 ರವರ ನಡುವೆ ಜಾಗೆಯ ವಿಚಾರವಾಗಿ ಸಿವಿಲ್ ದಾವೆ ದಾಖಲಾಗಿ ಅವರುಗಳ ನಡುವೆ ದ್ವೇಷ ಮತ್ತು ವೈಮನಸ್ಸು ಇರುವುದು ಕಂಡು ಬರುತ್ತದೆ. ಯಾವುದೇ ಒಂದು ಪ್ರಕರಣದಲ್ಲಿ ಎರಡು ಪಕ್ಷಗಾರರ ಮದ್ಯೆ ದ್ವೇಷ ಮತ್ತು ವೈಷಮ್ಯ ಇದ್ದಾಗ ಸಾಕ್ಷಿದಾರರ ಸಾಕ್ಷ್ಯವನ್ನು ನ್ಯಾಯಾಲಯವು ಪರಿಗಣಿಸುವಾಗ ಎಚ್ಚರಿಕೆ ವಹಿಸುವುದು ಅಗತ್ಯವಾಗಿರುತ್ತದೆ ಎಂದು ಮಾನ್ಯ ಸರ್ವೋಚ್ಛ ನ್ಯಾಯಾಲಯದ 2005 ಸಿಆರ್ ಎಲ್ ಜೆ 669(ಎಸ್.ಸಿ) ಯಲ್ಲಿ ವರದಿಯಾಗಿರುವ ರಾಮಶಿಶ್ಯರಾಯ - ವಿರುದ್ಧ - ಜಗದೀಶ್ ಸಿಂಗ್ ಪ್ರಕರಣದಲ್ಲಿ ಹೇಳುವಂತೆ ದ್ವೇಷ ಎಂಬುದು ಎರಡು ತುದಿಗಳನ್ನು ಹೊಂದಿರುವ ಖಡ್ಗ ಎಂಬುದು ಸ್ಥಾಪಿತವಾದ ಕಾನೂನು ತತ್ವವಾಗಿರುತ್ತದೆ. ಆದುದರಿಂದ ಶತ್ರು ಸಾಕ್ಷ್ಯಗಳನ್ನು ಪರೀಕ್ಷಿಸುವ ಸಮಯದಲ್ಲಿ ನ್ಯಾಯಾಲಯವು ಅಗತ್ಯ ಎಚ್ಚರಿಕೆ ವಹಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ ಎಂದು ಉಲ್ಲೇಖ ಇರುತ್ತದೆ. ಈ ಮೇಲಿನ ತೀರ್ಪುಜನ್ಯದ ಅನುಪಾತವನ್ನು ಈ ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಿದಾಗ ಈ ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ.1 ಮತ್ತು 2 ಮತ್ತು ಆರೋಪಿತರ ನಡುವೆ ದ್ವೇಷ ಮತ್ತು ವೈಮನಸ್ಸು ಇರುವುದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯಗಳನ್ನು ಪರೀಕ್ಷಿಸುವ ಸಮಯದಲ್ಲಿ ನ್ಯಾಯಾಲಯವು ಅಗತ್ಯ ಎಚ್ಚರಿಕೆ ವಹಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ-2 ರವರನ್ನು ಹೊರತುಪಡಿಸಿ ಯಾವುದೇ ಸ್ವತಂತ್ರ್ಯ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವದಿಲ್ಲ. ಪ್ರಾಸಾ-2 ರವರು ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರಾ.ಸಾ: 2 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವಾತಂತ್ರ್ಯ ಸಾಕ್ಷಿದಾರರ ಸಮರ್ಥನೆ ಇಲ್ಲದೇ ಪ್ರಾ.ಸಾ: 2 ರವರುಗಳ ಸಾಕ್ಷ್ಯದ ಕುರಿತು ಸಂಶಯವನ್ನುಂಟು ಮಾಡುತ್ತದೆ. ಹಾಗಾಗಿ ಈ ಮೇಲಿನ ತೀರ್ಪುಜನ್ಯದ ಅನುಪಾತವು ಈ ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುತ್ತದೆ.

30. ಪ್ರಾಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ದಿ: 18-12-2014 ರಂದು ಬೆಳಿಗ್ಗೆ 9-30 ರಿಂದ 10-30 ಗಂಟೆಯ ವರೆಗೆ ಚಾಸಾ-1 ರವರು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ನಿಪಿ-1 ರಂತೆ ಸ್ಥಳ ಮಹಜರನ್ನು ಜರುಗಿಸಿರುವ ಕುರಿತು ಮತ್ತು ಚಾಸಾ-1 ರವರು ಹಾಜರುಪಡಿಸಿದ ಹಿಡಿಯ ಅಳತೆಯ ಎರಡು ಕಲ್ಲುಗಳನ್ನು ಅಮಾನತ್ತು ಪಡಿಸಿಕೊಂಡಿರುವ ಸಾಕ್ಷ್ಯವನ್ನು ನುಡಿದಿರುತ್ತಾರೆ.

31. ಸ್ಥಳ ಮಹಜರ ಸಾಕ್ಷಿದಾರರಾದ ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ-6 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೇ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅದೇ ರೀತಿಯಾಗಿ ಇನ್ನೊರ್ವ ಸ್ಥಳ ಮಹಜರ ಸಾಕ್ಷಿದಾರರಾದ ಚಾಸಾ-3 ರವರು ಮೃತಪಟ್ಟಿರುವುದರಿಂದ ಅವರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ . ಅದೇ ರೀತಿಯಾಗಿ ಸ್ಥಳ ಮಹಜರ ಮಾಡಲು ಸ್ಥಳ ತೋರಿಸಿರುವ ಕುರಿತು ಸಾಕ್ಷಿದಾರರಾದ ಪ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ6 ರವರು ಸ್ಥಳ ಮಹಜರ ಮಾಡಲು ಸ್ಥಳ ತೋರಿಸಿರುವ ಕುರಿತು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಪ್ರಾಸಾ-6 ರವರು ಪೊಲೀಸ ಇಲಾಖೆ ಅಧಿಕಾರಿಯಾಗಿರುವುದರಿಂದ ಸದರಿ ಸಾಕ್ಷಿದಾರರು ಹಿತಾಸಕ್ತಿವುಳ್ಳ ಸಾಕ್ಷಿದಾರರು ಆಗಿರುತ್ತಾರೆ. ಹಾಗಾಗಿ ಪ್ರಾಸಾ-6 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ ಸಾಕ್ಷಿದಾರರ ಸಮರ್ಥನೆ ಇಲ್ಲದೆ ಪ್ರಾಸಾ-6 ರವರ ಸಾಕ್ಷ್ಯದ ಕುರಿತು ಸಂಶಯವನ್ನುಂಟು ಮಾಡುತ್ತದೆ. ಆದ್ದರಿಂದ ಪ್ರಾಸಾ-6 ರವರರು ನಿಪಿ-1 ರ ಸ್ಥಳ ಮಹಜರ್ ನ್ನು ಪ್ರಾಸಾ-1 ಮತ್ತು ಚಾಸಾ-3 ರವರ ಸಮಕ್ಷಮದಲ್ಲಿ ಜರುಗಿಸಿ ಚಾಸಾ-1 ರವರು ಹಾಜರುಪಡಿಸಿದ ಮು.ಮಾ-1 ಮತ್ತು 2 ಗಳನ್ನು ಅಮಾನತ್ತುಪಡಿಸಿಕೊಂಡ ಕುರಿತು ಸಂಶಯವನ್ನುಂಟು ಮಾಡುತ್ತದೆ.

32. ಈ ಪ್ರಕರಣದಲ್ಲಿ ಪ್ರಾಸಾ-8 ವೈದ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ಗಾಯಾಳುಗಳಿಗೆ ಉಪಚಾರ ಮಾಡಿ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುವ ಕುರಿತು ನುಡಿದಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರುಗಳು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅದೇ ರೀತಿಯಾಗಿ ಈ ಪ್ರಕರಣದಲ್ಲಿ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಪ್ರಾಸಾ-3 ಮತ್ತು 4 ರವರು ಸಹ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ-2, 5 ಮತ್ತು 6 ರವರುಗಳ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ

ಸಾಕ್ಷಿದಾರರು ಸಾಕ್ಷ್ಯಗಳ ಸಮರ್ಥನೆ ಇಲ್ಲದೇ ಆರೋಪಿತರು ಚಾಸಾ-1, ಚಾಸಾ-4 ಮತ್ತು 5 ರವರಿಗೆ ಹೊಡೆ ಬಡೆ ಮಾಡಿ ಜೀವದ ಬೆದರಿಕೆ ಹಾಕಿರುತ್ತಾರೆ ಎಂಬ ನಿರ್ಣಯಕ್ಕೆ ಬರಲಾಗುವುದಿಲ್ಲ. ಆದ್ದರಿಂದ ಪ್ರಾಸಾ-2, 5 ಮತ್ತು 6 ರವರುಗಳ ಸಾಕ್ಷ್ಯಗಳ ಆಧಾರದ ಮೇಲೆ ಆರೋಪಿತರು ಈ ಪ್ರಕರಣದಲ್ಲಿ ಹೇಳಿರುವಂತೆ ಅಪರಾಧ ಮಾಡಿರುತ್ತಾರೆ ಎಂದು ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

33. ಈ ಮೇಲ್ಕಂಡಂತೆ ಅಭಿಯೋಜನೆ ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರುಗಳು ನ್ಯಾಯಾಲಯಕ್ಕೆ ಬಂದು ಪ್ರಾಸಾ-2 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅದೇ ರೀತಿಯಾಗಿ ಈ ಪ್ರಕರಣದಲ್ಲಿ ಪ್ರತ್ಯಕ್ಷ್ಯ ಮತ್ತು ಗಲಾಟೆ ಬಿಡಿಸಿರುವ ಕುರಿತು ಸಾಕ್ಷಿದಾರರಾದ ಪ್ರಾ.ಸಾ.3 ಮತ್ತು 4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆಯವರು ತಮ್ಮ ಪರವಾಗಿ ವಿಚಾರಣೆಗೆ ಒಳಪಡಿಸಿರುವ ಸಾಕ್ಷಿದಾರರು ಆರೋಪಿತರ ವಿರುದ್ಧ ಅಂತಿಮ ವರದಿಯಲ್ಲಿ ಹೇಳಿರುವಂತೆ ಅಪರಾಧ ಮಾಡಿರುವುದಾಗಿ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುವುದಿಲ್ಲ. ಹಾಗಾಗಿ ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ನಿಸ್ಸಂದೇಹವಾಗಿ, ಪೂರಕವಾದ ಮತ್ತು ಪ್ರಭಲವಾದ ಸಾಕ್ಷ್ಯಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡು ಬರುತ್ತದೆ. ಆ ಮೇರೆಗೆ ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸಲು ವಿಫಲವಾಗಿರುತ್ತದೆ ಎಂದು ನಿರ್ಣಯಕ್ಕೆ ಬಂದು ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಅಂತ ಅಭಿಪ್ರಾಯಪಟ್ಟು ಅಂಶ ಸಂಖ್ಯೆ 1 ರಿಂದ 4 ನ್ನು ನಕಾರಾತ್ಮಕ ಅಂತ ಉತ್ತರಿಸಿರುತ್ತೇನೆ.

34. ಅಂಶ ಸಂಖ್ಯೆ **5** ಃ- ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿ ನಂಃ 1 ರಿಂದ 10, 12 ರಿಂದ 15 ರವರ

ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ. 323, 324, 504 ಮತ್ತು 506 ಸಹಕಲಂ: 149 ರ ಅಡಿಯಲ್ಲಿ ಆರೋಪಗಳು ಸಾಭೀತಾಗದ ಕಾರಣ ಆರೋಪಿ ನಂ: 1 ರಿಂದ 10, 12 ರಿಂದ 15 ರವರನ್ನು ಖುಲಾಸೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ನಂ: 1 ರಿಂದ 10, 12 ರಿಂದ 15 ರವರ ಮತ್ತು ಅವರ ಜಾಮೀನುದಾರರು ದಂ.ಪ್ರ.ಸಂ. ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಮುದ್ದೆ ಮಾಲು-1 ಮತ್ತು 2 ಕಲ್ಲುಗಳು ಬೆಲೆಬಾಳದ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿಯ ನಂತರ ನಾಶಪಡಿಸಲು ಆದೇಶಿಸಿಸಲಾಗಿದೆ.

(ಈ ತೀರ್ಪನ್ನು ಶೀಘ್ರುಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 7 ನೇ ಜುಲೈ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬಸವನ ಬಾಗೇವಾಡಿ

ಅ ನು ಬಂ ಧ

ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-

ಪ್ರಾ.ಸಾ.1- ಚಂದ್ರಾಮಪ್ಪ ತಂದೆ ಮಲ್ಲಪ್ಪ ಹೊನ್ನರೆಡ್ಡಿ

ಪ್ರಾ.ಸಾ.2- ಸಗರಪ್ಪ ತಂದೆ ಚಂದ್ರಾಮಪ್ಪ ಗಡೇದ

ಪ್ರಾ.ಸಾ.3- ಮಲ್ಲನಗೌಡ ಶಂಕರಗೌಡ ಚೀರಲದಿನ್ನಿ

ಪ್ರಾ.ಸಾ.4- ಚಂದ್ರುಶೇಖರ ಬಸವಂತಪ್ಪ ಸಾರವಾಡ

ಪ್ರಾ.ಸಾ.5- ಡಾ: ಅಶೋಕ ನೀಲಪ್ಪ ಪಟ್ಟಣಶೆಟ್ಟಿ , ವೈದ್ಯಾಧಿಕಾರಿ

ಪ್ರಾ.ಸಾ.6- ರವೀಂದ್ರು ಕಾಮಣ್ಣ ನಾಯಕೋಡಿ, ಪಿ ಎಸ್ ಐ

ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-

ನಿ.ಪಿ.1 - ಸ್ಥಳ ಮಹಜರ

ನಿ.ಪಿ.2 - ದೂರು

ನಿ.ಪಿ.3 - ಪ್ರಾ.ಸಾ.3 ರವರು ಅಲ್ಲಗಳೆದ ಹೇಳಿಕೆ ಭಾಗ

ನಿ.ಪಿ.4 -ಪ್ರಾ.ಸಾ.4 ರವರು ಅಲ್ಲಗಳೆದ ಹೇಳಿಕೆ ಭಾಗ

ನಿ.ಪಿ.5-6- ಗಾಯದ ಪ್ರಮಾಣ ಪತ್ರಗಳು

ನಿ.ಪಿ.7 -ಪ್ರಥಮ ವರ್ತಮಾನ ವರದಿ

ನಿ.ಪಿ.8-9 - ವರದಿಗಳು

ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ- - ಇಲ್ಲ -

ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-- ಇಲ್ಲ -

ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ-

ಮುದ್ದೆ ಮಾಲು-1-2 ಃ ಕಲ್ಲುಗಳು

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬಸವನ ಬಾಗೇವಾಡಿ